ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 103/2015**

**ಪ್ರಾಸಾ-17 ಹೆಚ್ಚುವರಿ ಸಾಕ್ಷಿ**

ಸಾಕ್ಷಿದಾರರ ಹೆಸರುಃ : ಡಾಃ ಮಂಜುಳಾ ಎನ್

ಗಂಡನ ಹೆಸರುಃ : ದೀಪಕ್ ಆರ್ ಎಲ್

ವಯಸ್ಸುಃ : 50 ವರ್ಷ

ಉದ್ಯೋಗಃ : ಕಾರ್ಯದರ್ಶಿ, Dept. of Electronics

ವಾಸ : ಬೆಂಗಳೂರು

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 23-03-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಜುಲೈ 2013 ರಿಂದ ಜುಲೈ 2016ರವರೆಗೆ ಸರ್ಕಾರದ ಪೌರಾಡಳಿತ ನಿರ್ದೇಶನಾಲಯದಲ್ಲಿ ನಿರ್ದೇಶಕಳಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 23-2-2015ರಂದು ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇದರ ಉಪ ಪೊಲೀಸ್ ಮಹಾನಿರೀಕ್ಷಕರು ಹಾಸನ ನಗರ ಸಭೆಯಲ್ಲಿ ಸಹಾಯಕ ಅಭಿಯಂತರರಾಗಿದ್ದ ಜೆ ಪಿ ಆನಂದ್ ಇವರ ಮೇಲೆ ಅಭಿಯೋಜನಾ ಮಂಜೂರಾತಿ ನೀಡಬೇಕೆಂದು ಮನವಿ ಸಲ್ಲಿಸಿದ್ದರು. ಅದರ ಜೊತೆಗೆ ಸೋರ್ಸ್ ವರದಿ, ತನಿಖಾಧಿಕಾರಿಗಳ ಅಂತಿಮ ವರದಿ, ಮನೆ ಶೋಧನಾ ಪಂಚನಾಮೆ ಮತ್ತಿತರ ವಿವರಗಳುಳ್ಳ ದಾಖಲಾತಿಗಳನ್ನು ಕಳುಹಿಸಿದ್ದರು. ಅದರಲ್ಲಿ ಸದರಿ ನೌಕರರು ಅವರ ನ್ಯಾಯಸಮ್ಮತ ಆದಾಯಕ್ಕಿಂತ ಶೇಕಡ 90.75ರಷ್ಟು ಅಕ್ರಮ ಆಸ್ತಿ ಹೊಂದಿದ್ದಾರೆಂದು ಕಾಣಿಸಿದ್ದರು. ನನಗೆ ಕಳುಹಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ ಅವರ ಮೇಲಿನ ಆಪಾದನೆ ದೃಢವೆಂದು ಕಂಡುಬಂದಿದ್ದರಿಂದ ದಿನಾಂಕ 11-5-15ರಂದು ಸದರಿ ನೌಕರರ ಮೇಲೆ ಅಭಿಯೋಜನೆ

ನಡೆಸಲು ಅಭಿಯೋಜನಾ ಮಂಜೂರಾತಿ ಆದೇಶವನ್ನು ನಿಪಿ-166ರಂತೆ ನೀಡಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-166(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀ ಡಿ ಎಂ ಪಿ ವಕೀಲರಿಂದಃ**

ನಿಪಿ-166ರ ಉಲ್ಲೇಖ 3 ರಲ್ಲಿ ನನಗೆ ಏನೇನು ದಾಖಲಾತಿಗಳನ್ನು ಕಳುಹಿಸಿದ್ದಾರೆಂದು ನಮೂದಿಸಿದ್ದೇನೆ ಎಂದರೆ ನಿಜ. ಯಾವ ಯಾವ ದಾಖಲೆಗಳನ್ನು ಕಳುಹಿಸಿದ್ದಾರೆಂದು ಕಾಣಿಸಿದ್ದೀರಾ ಎಂದರೆ ಸಾಕ್ಷಿಯು ಉಲ್ಲೇಖ 3 ರಲ್ಲಿ ತಪ್ಪಾಗಿ ನಮೂದಾಗಿದೆ, ಕಳುಹಿಸಿರುವ ದಾಖಲೆಗಳನ್ನು ಪ್ರಸ್ತಾವನೆಯಲ್ಲಿ ಕಾಣಿಸಿದ್ದೇನೆ ಎನ್ನುತ್ತಾರೆ. ನಿಪಿ-166ರ ಪ್ರಸ್ತಾವನೆಯ ಕ್ರಮಸಂಖ್ಯೆ 1 ರಲ್ಲಿ ನರಸಿಂಹಮೂರ್ತಿ ಟಿ ಎನ್ ಪಿ ಐ ರವರ ಸೋರ್ಸ್ ವರದಿ ಎಂದು ಕಾಣಿಸಿರುತ್ತೇನೆ, ಸದರಿಯವರು ಯಾವುದೇ ಸೋರ್ಸ್ ವರದಿ ತಯಾರಿಸಿಲ್ಲ ಎಂದರೆ ಸಾಕ್ಷಿಯು ದಿನಾಂಕ 6-2-15 ಎಂದು ತಪ್ಪಾಗಿ ಕಾಣಿಸಿರುತ್ತೇನೆ ಮತ್ತು ಸೋರ್ಸ್ ವರದಿ ತಯಾರಿಸಿದವರ ಹೆಸರು ನರಸಿಂಹಮೂರ್ತಿ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನಗೆ ಕಳುಹಿಸಿದ ಅಂತಿಮ ವರದಿ, ಮನೆ ಶೋಧನಾ ಪಂಚನಾಮೆ ಮತ್ತು ಉಪ ಪೊಲೀಸ್ ಮಹಾನಿರೀಕ್ಷಕರ ಶಿಫಾರಸ್ಸಿನ ಪತ್ರ ಇತರ ದಾಖಲಗೆಳನ್ನು ಪರಿಶೀಲಿಸಿರುತ್ತೇನೆ. ಆರೋಪಿತರ ಅನುಬಂಧದ ದಾಖಲೆಗಳನ್ನು ನನಗೆ ಕಳುಹಿಸಿದ್ದಾರಾ ಎಂದರೆ ನನಗೆ ಗೊತ್ತಿಲ್ಲ.

2.ಆರೋಪಿತರು ತಮ್ಮ ಸೇವಾ ಅವಧಿಯಲ್ಲಿ ತಾವು ಹೊಂದಿರುವ ಆದಾಯ ಆಸ್ತಿ ಜವಾಬ್ದಾರಿಗಳ ಅನುಬಂಧವನ್ನು ತಮ್ಮ ಇಲಾಖೆಗೆ ಸಲ್ಲಿಸಿದ ಬಗ್ಗೆ ದಾಖಲಾತಿಯನ್ನು ನನಗೆ ಒದಗಿಸಿದ್ದಾರಾ ಎಂದರೆ ಸಾಕ್ಷಿಯು ನಾನು ಅಂತಿಮ ವರದಿಯ ಮೇಲೆ ಮಂಜೂರಾತಿ ನೀಡಿರುತ್ತೇನೆ ಎನ್ನುತ್ತಾರೆ. ನನ್ನ ಪ್ರಕಾರ ಅಂತಿಮ ವರದಿ ದಿಃ23-2-15 ರಂದು ಇರುತ್ತದೆ. ಆರೋಪಿತರು ನಮ್ಮ ಇಲಾಖೆಗೆ ಸಲ್ಲಿಸಿದ ತಮ್ಮ ಆಸ್ತಿ ಮತ್ತು ದಾಯತ್ವ ಪಟ್ಟಿಯನ್ನು ನಾನು ಪರಿಶೀಲಿಸಿಲ್ಲ. ಲೋಕಾಯುಕ್ತ ಉಪ ಪೊಲೀಸ್ ಮಹಾನಿರೀಕ್ಷಕರು ಸಲ್ಲಿಸಿದ ಕೋರಿಕೆ ಪತ್ರದೊಂದಿಗೆ ಕರಡು ಅಭಿಯೋಜನಾ ಮಂಜುರಾತಿ ಆದೇಶವನ್ನು ಕಳುಹಿಸಿದ್ದರು ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ತಮ್ಮ ಮೇಲಿರುವ ಅಪಾದನೆಯ ಬಗ್ಗೆ ನಿಮ್ಮ ವಿವರಣೆ ಏನು ಎಂದು ಕೇಳಿಲ್ಲ. ನಿಪಿ-166ರಲ್ಲಿ ನಾನು ಆರೋಪಿತರ ಆಸ್ತಿ ಆದಾಯ ಖರ್ಚಿನ ಬಗ್ಗೆ ಯಾವುದನ್ನು ಒಪ್ಪಿಕೊಂಡಿರುತ್ತೇನೆ ಯಾವುದನ್ನು

ಒಪ್ಪಿಕೊಂಡಿಲ್ಲ ಎಂಬ ಬಗ್ಗೆ ಚರ್ಚಿಸಿಲ್ಲ ಎಂದರೆ ನಿಜ. ಆ ಬಗ್ಗೆ ವಿವರಣೆ ಬರೆಯಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯ ಸಾಮಾನ್ಯವಾಗಿ ನಾವು ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿ ವರದಿ ನೀಡುತ್ತೇವೆ ಎನ್ನುತ್ತಾರೆ. ಅಭಿಯೋಜನಾ ಮಂಜೂರಾತಿ ಆದೇಶ ಸರ್ಕಾರದ ನಡವಳಿಕೆ. ಸದರಿ ನಡವಳಿಕೆಗೆ ಸಹಿ ಹಾಕುವುದಕ್ಕಿಂತ ಮೊದಲು ಎಲ್ಲವನ್ನು ಪರಿಶೀಲನೆ ಮಾಡಿ ಸಹಿ ಹಾಕುತ್ತೇನೆ ಎಂದರೆ ನಿಜ. ನನಗೆ ಯಾವುದೇ ದಾಖಲೆಗಳನ್ನು ಕಳುಹಿಸಿರಲಿಲ್ಲ ನಾನು ವರದಿಯ ಆಧಾರದಲ್ಲಿ ಯಾಂತ್ರಿಕವಾಗಿ, ಸರಿಯಾಗಿ ಪರಿಶೀಲನೆ ಮಡದೆ ನಿಪಿ-166ರ ಅಭಿಯೋಜನಾ ಮಂಜೂರಾತಿ ಆದೇಶ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**